ವಯಸ್ಸಾದಂತೆ ಆಕೆಯ ಮಕ್ಕಳು ಬೆಳೆದು ಶಾಲೆಯ ಕಡೆ ಮುಖ ಮಾಡಿದ ಮೇಲೆ ಆಕೆಗೆ ಒಳ ಬಯಕೆಗಳು ವಯೋಸಹಜವಾಗಿ ಜಾಸ್ತಿಯಾದಂತಿರಬೇಕು! ಗಂಡ ಕರಿವೀರ ಹೆಚ್ಚಿಗೆ ಮಾತಾಡದೇ ಮೌನಿಯಾಗಿಯೇ ಎಷ್ಟು ಬೇಕೋ ಅಷ್ಟು ಮಾತ್ರ ಅನ್ನಪೂರ್ಣಳ ಜೊತೆ ಮಾತಾಡುತ್ತಿದ್ದ. ಅಕ್ಕಪಕ್ಕದ ಮನೆಯವರು, ಊರಿನ ಪರಿಚಿತರಾದ ಗಂಡ-ಹೆಂಡತಿ ಜೋಡಿ ಜೊತೆಯಾಗಿ ಪೇಟೆಗೆ ಹೋಗುವುದು, ಸಂತೆಗೆ ಹೋಗುವುದು, ಸೀರೆ ಇತ್ಯಾದಿ ವಸ್ತುಗಳನ್ನು ಜೊತೆಯಲ್ಲಿ ಆಯ್ಕೆ ಮಾಡಿ ತಮಗಿಷ್ಟವಾದವುಗಳನ್ನು ಖರೀದಿಸಿ ತರುವುದು, ನಗಾಡುತ್ತಾ ಮಾತಿನಲ್ಲಿ ಸಲ್ಲಾಪವಾಡುವುದು ಈ ರೀತಿಯ ದೃಶ್ಯಗಳನ್ನು ನೋಡಿದಾಗಲೆಲ್ಲ 'ತನ್ನ ಗಂಡ ಹೀಗಿಲ್ಲವಲ್ಲ!' ಎಂದು ಅನ್ನಪೂರ್ಣ ಒಳಗೊಳಗೇ ನೊಂದುಕೊಳ್ಳುತ್ತಿದ್ದಳು. ಹಾಸಿಗೆಯಲ್ಲಿ ಜಡಗೊಂಡವಳಾಗಿ ಮುದುಡಿ ಮಲಗುತ್ತಿದ್ದಳು. ಆಕೆಗೆ ಗಂಡನ ಮನೋಸಾಮೀಪ್ಯದ ಕೊರತೆ ಕಾಣುತ್ತಿತ್ತು. ಅದುಮಿಡಲಾರದ ಬಯಕೆಗಳು ಅವಳನ್ನು ಮೀರಿ ಹೊರಬರುತ್ತಿದ್ದವು. ಈ ರೀತಿಯ ಮನೋಬಯಕೆಗಳು ದಿನೇ ದಿನೇ ಮನಸ್ಸಿನಲ್ಲಿ ಮೂಡಿ ಅವುಗಳಿಗೆ ರೆಕ್ಕೆಪುಕ್ಕ ಬೆಳೆದು ನೆಲ-ಮುಗಿಲನ್ನು ಒಂದು ಮಾಡುವಂತೆ ಹಾರಾಡುತ್ತಿದ್ದ ಸಮಯದಲ್ಲಿಯೇ ಹೊಸದೊಂದು ಆಸೆಯ ಪುಳಕ ಅವಳ ಮೈಯಲ್ಲಿ ಮೊಳಕೆಯೊಡೆಯಿತು.

ಶ್ರೀಕಂಠ ಮತ್ತು ಅನ್ನಪೂರ್ಣ ಇಬ್ಬರೂ ಅದೇ ಊರಿನ ಕರುವಿನಕಟ್ಟೆ ಪ್ರೌಢಶಾಲೆಯಲ್ಲಿ ಒಟ್ಟಿಗೆ ಕಲಿತವರು. ಶ್ರೀಕಂಠ ಓದಿ ಶಿಕ್ಷಣ ಮುಗಿಸಿದ್ದ. ಅಲ್ಲದೆ ಅನ್ನಪೂರ್ಣಳ ಮನೆಯ ಓಣಿಯಲ್ಲಿಯೇ ಶ್ರೀಕಂಠನ ಮನೆಯೂ ಇದ್ದು, ಜಾತಿ ಬೇರೆ ಬೇರೆ ಇದ್ದರೂ ಆಗಾಗ ಇವಳ ಮನೆಗೆ ಅವನೂ, ಅವನ ಮನೆಗೆ ಇವಳೂ ಹೋಗಿಬಂದು ಮಾಡುತ್ತಿದ್ದರು. ಶ್ರೀಕಂಠನಿಗೆ ಮದುವೆಯ ವಯಸ್ಸು ದಾಟಿದ್ದರೂ ಇನ್ನೂ ಮದುವೆಯಾಗಿರಲಿಲ್ಲ. ಅವನ ಮನೆಯ ಸ್ಥಿತಿ ಉತ್ತಮವಾಗಿದ್ದು ಹೆಚ್ಚಿನ ಜಮೀನು ಹೊಂದಿ ತೋಟದಲ್ಲಿ ಉತ್ತಮವಾಗಿ ಬೆಳೆ ಬೆಳೆಯುವುದು, ಎತ್ತು, ಹಸು, ಎಮ್ಮೆಗಳು ಬೇಕಾದಷ್ಟಿದ್ದವು. ಜೊತೆಗೆ ಊರಿನಲ್ಲಿ ದೊಡ್ಡ ಮನೆಯನ್ನೂ ಹೊಂದಿದ್ದರು. ಶ್ರೀಕಂಠ ಆಗಾಗ್ಗೆ ಅನ್ನಪೂರ್ಣಳ ಮನೆಯ ಮುಂದಿನ ಕಟ್ಟೆಯ ಮೇಲೆ ಬಂದು ಕುಳಿತು ಹರಟೆಯೊಡೆಯುತ್ತಾ



ಕಾಲ ಕಳೆಯುವುದು ಇತ್ತು. ಅನ್ನಪೂರ್ಣಳ ಮದುವೆಯಾಗಿ ಹತ್ತು ವರ್ಷ ಕಳೆದರೂ ಅವರಲ್ಲಿಯ ಸ್ನೇಹ ಬೇರೆ ಯೋಚನೆಗೆ ಹೊರಳದಂತೆ ಇಷ್ಟಕ್ಕೇ ಇತ್ತು. ಯಾರಿಗೂ ಸಹ ಅನುಮಾನ ಬರದಂತೆ ಇದ್ದರು. ದಿನಕಳೆದಂತೆ ಇತ್ತಿತ್ತಲಾಗಿ ಅನ್ನಪೂರ್ಣಳ ಮನಸ್ಸಿನ ಬಯಕೆಯ ಒತ್ತಡಕ್ಕೆ ಮಣಿದೊ ಅಥವಾ ಶ್ರೀಕಂಠನ ಮನದಿಚ್ಛೆಯಂತೆಯೊ ಇಬ್ಬರೂ ಜೊತೆಯಾಗಿ ಪೇಟೆಗೆ ಹೋಗುವುದು, ಮನೆ ಬಳಕೆಯ ಸಾಮಾನುಗಳನ್ನು ಜೊತೆಯಾಗಿಯೇ ತರುವ ಸಂದರ್ಭಗಳಲ್ಲಿಯೋ,